ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ, ನ.ರಾ.ಪುರ.
ಸಿ.ಸಿ. ನಂ ಃ143/2026

| | | |
|---|---|---|
| ಸಾಕ್ಷಿದಾರರ ಹೆಸರು | ಃ ಗುರುದತ್ತ ಕಾಮತ್ | ಸಿ.ಡಬ್ಲ್ಯೂ - 18 |
| ತಂದೆಯ ಹೆಸರು | ಃ ಅನಂತ್ | ಪಿ.ಡಬ್ಲ್ಯೂ -08 |
| ವಯಸ್ಸು | ಃ 46 ವರ್ಷ | |
| ಉದ್ಯೋಗ | ಃ C.P.I, ಎನ್ ಆರ್ ಪುರ | |
| ವಾಸಸ್ಥಳ | ಃ ಎನ್ ಆರ್ ಪುರ. | |

ದಿನಾಂಕಃ 13.07.2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ

ನಾನು ದಿಃ 01/03/2024 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ದಿಃ 15.12.2025 ರಂದು ಈ ಪ್ರಕರಣದ ಕಡತವನ್ನು ಚಾಸಾ 17 ರವರಿಂದ ಪಡೆದುಕೊಂಡು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ಅದೇ ದಿನ ಚಾಸಾ 9 ಮತ್ತು ಚಾಸಾ 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 17.12.2026 ರಂದು ಅಪಘಾತ ಪಡಿಸಿದ ಟ್ರಾಕ್ಟರ್ ಸಂಖ್ಯೆಃ KA 18 TB 2190 ಹಾಗೂ ಟ್ರೆಲರ್ ಸಂಖ್ಯೆಃ KA 18 TB 2196 ಇನ್ನು ವಾಹನಾ ತಪಾಸಣೆ ಮಾಡಿಸಿರುತ್ತೇನೆ. ಅದೇ ದಿನ ಆರೋಪಿ ಇವರಿಗೆ ಟ್ರಾಕ್ಟರ್ ಗೆ ಸಂಬಂಧಪಟ್ಟ ದಾಖಲಾತಿಗಳು ಹಾಗೂ ತಮಗೆ ಚಾಲನಾ ಪರವಾನಿಗೆ ಪತ್ರ ಹಾಜರುಪಡಿಸುವಂತೆ ನೋಟಿಸನ್ನು ಜಾರಿಗೊಳಿಸಿ ಅವರಿಂದ ದಿಃ 18.12.2025 ರಂದು ಆರೋಪಿಯು ದಾಖಲಾತಿಯನ್ನು ತಂದು ಹಾಜರುಪಡಿಸಿರುತ್ತಾರೆ. ದಿಃ 18.12.2025 ರಂದು ಆರೋಪಿಗೆ ತನಿಖೆಗೆ ಸಹಕರಿಸುವಂತೆ ಕಲಂ 35(3) ಬಿ.ಎನ್.ಎಸ್.ಎಸ್. ಕಾಯ್ದೆ ಯಡಿ ನೋಟಿಸನ್ನು ಜಾರಿಗೊಳಿಸಿರುತ್ತೇನೆ. ಅದೇ ದಿನ ಟ್ರಾಕ್ಟರ್ ಮತ್ತು ಟ್ರೆಲರ್ ಅನ್ನು ಇಂಡೆಮ್ನಿಟಿ ಬಾಂಡ್ ಮೇಲೆ ಆರೋಪಿಗೆ ಬಿಡುಗಡೆಗೊಳಿಸಿರುತ್ತೇನೆ.

3. ದಿಃ 18.12.2025 ರಂದು ಮೃತ ಕೃಷ್ಣಮೂರ್ತಿ ಇವರ ಶವ ಪರೀಕ್ಷಾ ವರದಿಯನ್ನು ಸರ್ಕಾರಿ ಆಸ್ಪತ್ರೆ ಎನ್.ಆರ್.ಪುರ ಇವರಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 02.01.2026 ರಂದು ಮೃತರ ಸಂಬಂಧಿಕರಾದ ಚಾಸಾ-11 ಮತ್ತು ಚಾಸಾ-12 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ 30.01.2026 ರಂದು ವಾಹನಾ ತಪಾಸಣಾ

ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಆರೋಪಿಯ ವಿರುದ್ಧ ಸಾಕ್ಷ್ಯಾಧಾರಗಳು ಲಭ್ಯವಾದ ಕಾರಣ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಹಾಗೂ ಅಪಘಾತ ಪಡಿಸಿದ ಟ್ರಾಕ್ಟರ್ ನ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

4. ಸಾಕ್ಷಿಯು ದಿಃ 17.12.2025 ರಂದು ಕಲಂ 35(3) ರಡಿ ನೀಡಿದ ನೋಟಿಸು ಪ್ರತಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ- 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ- 12(ಏ) ಎಂದು ಗುರುತಿಸಲಾಯಿತು. ದಿಃ 18.12.2025 ರಂದು ತಾವು ಸ್ವೀಕರಿಸಿದ ಶವ ಪರೀಕ್ಷಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಏ) ಎಂದು ಗುರುತಿಸಲಾಯಿತು. ದಿಃ 30.01.2026 ರಂದು ತಾವು ಸ್ವೀಕರಿಸಿದ ವಾಹನ ತಪಾಸಣಾ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಏ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 18.12.2025 ರಂದು ಇಂಡಿನ್ಮಿಟಿ ಬಾಂಡ್ ಮೇಲೆ ಟ್ರಾಕ್ಟರ್ ಅನ್ನು ಬಿಡುಗಡೆಗೊಳಿಸಿದ್ದು ಸದರಿ ಇಂಡಿನ್ಮಿಟಿ ಬಾಂಡ್ ಅನ್ನು ನೋಡಿ ಗುರುತಿಸಿದ್ದು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಏ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ K.S.S ವಕೀಲರಿಂದಃ</u>

**1.** ನಾನು ತನಿಖೆಯ ಕಾಲಕ್ಕೆ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿ. ಅಪಘಾತ ಆಗಿರುವ ಸಂಬಂಧ ಕೃತ್ಯ ಸ್ಥಳದ ನಕಾಶೆಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ತನಿಖೆಯ ಕಾಲಕ್ಕೆ ಸದರಿ ಅಪಘಾತ ಸ್ಥಳದ ಅಕ್ಕ-ಪಕ್ಕದವರನ್ನು ವಿಚಾರಣೆ ಮಾಡಿಲ್ಲ ಎಂದರೆ ಸಾಕ್ಷಿಯು ಸದರಿ ಸ್ಥಳವು ರಸ್ತೆ ಇದ್ದು ಪ್ರತ್ಯಕ್ಷ ಸಾಕ್ಷಿಯನ್ನು ವಿಚಾರಣೆ ಮಾಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದರೂ ಮೃತರ ಕುಟುಂಬಕ್ಕೆ ಸಹಾಯ ಮಾಡುವ ಸಲುವಾಗಿ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಯನ್ನು ಖುದ್ದಾಗಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು R.T.O. ಕಚೇರಿಯಿಂದ ಯಾವುದೇ ವರದಿಯನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಮರಣೋತ್ತರ ಪರೀಕ್ಷೆಯ ವರದಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

ಅಪಘಾತ ಆದ ನಂತರ ಪ್ರಕರಣದ ಕಡತವನ್ನು ನನಗೆ ವಹಿಸಬೇಕಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಕಾಲಕ್ಕೆ ನಾನು ತರಭೇತಿಗೆ ಹೋಗಿದ್ದೆ ಎಂದು ಉತ್ತರಿಸಿರುತ್ತಾರೆ. ಆ ಕಾಲಕ್ಕೆ ನನ್ನ ಸ್ಥಾನದಲ್ಲಿ ಇದ್ದ ಬದಲಿ ವ್ಯಕ್ತಿ ತನಿಖೆಯನ್ನು ಮಾಡಬೇಕಿತ್ತು ಎಂದರೆ ಸಾಕ್ಷಿ P.S.I ಅವರು Incharge ಇದ್ದರು ಎಂದು ಉತ್ತರಿಸಿರುತ್ತಾರೆ. P.S.I ಅವರು Incharge ಇದ್ದ ಬಗ್ಗೆ ನಾನು ದೋಷಾರೋಪಣಾ ಪಟ್ಟಿ ಸಲ್ಲಿಸುವ ಕಾಲಕ್ಕೆ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. P.S.I ಅವರಿಗೆ ತನಿಖೆ ಮಾಡಲು ಯಾವುದೇ ಅಧಿಕಾರಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ